125 ಶ್ರೀ ಮಹದೇವ ಪ್ರಸಾದ ಹೆಚ್.ಎಸ್. (ಗುಂಡ್ಲುಪೇಟೆ)
ಮಾನ್ಯ ಕಾರ್ಮಿಕ ಸಚಿವರು.

* * * * *

ಅ) ಗುಂಡ್ಲುಪೇಟೆ ಟೌನ್‌ನ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ:

ಗುಂಡ್ಲುಪೇಟೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಈಗಾಗಲೇ ಮೇಲ್ದರ್ಜೆಗೇರಿಸಲಾಗಿದೆ.

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಈಗಾಗಲೇ ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದ ಯೋಜನೆಯ ಕಾರ್ಯಕ್ರಮದಡಿಯಲ್ಲಿ ಕೇಂದ್ರ ಸರ್ಕಾರದಿಂದ ರೂ.2.5 ಕೋಟಿ ಬಡ್ಡಿರಹಿತ ಸಾಲ ಬಿಡುಗಡೆಯಾಗಿದೆ. ಈ ಮೊತ್ತವನ್ನು ಬಳಸಿ ಕಟ್ಟಡ ನಿರ್ಮಾಣ, ಯಂತ್ರೋಪಕರಣಗಳ ಖರೀದಿ, ತರಬೇತಿ ಅಧಿಕಾರಿಗಳಿಗೆ ತರಬೇತಿ ನೀಡಲು ಹಾಗೂ ಹೆಚ್ಚಿಗೆ ಬೇಡಿಕೆ ಇರುವ ವೃತ್ತಿಗಳನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಗಂಗಾ ಕಲ್ಯಾಣ ಯೋಜನೆಯ ಕೊಳವೆ ಬಾವಿಗಳು

129 ಶ್ರೀ.ನರಸಿಂಹನಾಯಕ (ರಾಜು ಗೌಡ)
ಸಮಾಜ ಕಲ್ಯಾಣ ಸಚಿವರು

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಗಂಗಾ ಕಲ್ಯಾಣ ಯೋಜನೆಯಡಿ ಮಂಜೂರಾದ ಒಟ್ಟು ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

2008–09ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಕ್ರಮವಾಗಿ 7825 ಹಾಗೂ 2823 ಕೊಳವೆ ಬಾವಿಗಳನ್ನು ಮಂಜೂರು ಮಾಡಲಾಗಿತ್ತು.

ಆ) ಎಷ್ಟು ಕೊಳವೆ ಬಾವಿಗಳು ಪೂರ್ಣಗೊಂಡು ಕಾರ್ಯನಿರತವಾಗಿವೆ;

ಕೊಳವೆ ಬಾವಿ ಘಟಕಗಳು ಕೊಳವೆ ಬಾವಿ ಕೊರೆಯುವ, ಪಂಪ್‌ಮೋಟಾರು ಅಳವಡಿಸುವ ಹಾಗೂ ವಿದ್ಯುದೀಕರಣಗೊಳಿಸುವ ಮೂರು ವಿವಿಧ ಹಂತದಲ್ಲಿವೆ.

ಇ) ಎಷ್ಟು ಎಕರೆ ಜಮೀನಿನ ಫಲಾನುಭವಿಗಳಿಗೆ ಗಂಗಾ ಕಲ್ಯಾಣ ಯೋಜನೆಯಿಂದ ನೀರಾವರಿ ಸೌಲಭ್ಯ ದೊರಕಿದೆ?

ಪರಿಶಿಷ್ಟ ಜಾತಿಗೆ ಸುಮಾರು 19,500.00 ಎಕರೆ ಜಮೀನು ಹಾಗೂ ಪರಿಶಿಷ್ಟ ಪಂಗಡದವರಿಗೆ 6211.20 ಎಕರೆ ವಿಸ್ತೀರ್ಣದ ಜಮೀನು ನೀರಾವರಿ ಒಳಪಡುತ್ತದೆ.

147 ಶ್ರೀ ನರಸಿಂಹ ನಾಯಕ (ರಾಜು ಗೌಡ) (ಸುರಪುರ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಒಟ್ಟು ಸರ್ಕಾರಿ ಆಸ್ಪತ್ರೆಗಳೆಷ್ಟು;

ಗುಲ್ಬರ್ಗಾ ಜಿಲ್ಲೆಯಲ್ಲಿ ಕೆಳಕಂಡಂತೆ 159 ಆಸ್ಪತ್ರೆಗಳು ಇವೆ.

1 ಜಿಲ್ಲಾ ಮಟ್ಟದ ಆಸ್ಪತ್ರೆ

9 ತಾಲ್ಲೂಕು ಆಸ್ಪತ್ರೆ

22 ಸಮುದಾಯ ಆರೋಗ್ಯ ಕೇಂದ್ರ

126 ಪ್ರಾಥಮಿಕ ಆರೋಗ್ಯ ಕೇಂದ್ರ

1 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ

ಆ) ಎಷ್ಟು ಜನ ವೈದ್ಯಾಧಿಕಾರಿಗಳು ಸೇವೆ ಸಲ್ಲಿಸುತ್ತಿದ್ದಾರೆ;

ಮಂಜೂರಾಗಿರುವ 390 ಹುದ್ದೆಗಳಲ್ಲಿ ಒಟ್ಟು 311 ಜನ ವೈದ್ಯಾಧಿಕಾರಿಗಳು ಸೇವೆ ಸಲ್ಲಿಸುತ್ತಿದ್ದಾರೆ.

ಇ) ಹಾಲಿ ಖಾಲಿ ಇರುವ ಹುದ್ದೆಗಳೆಷ್ಟು?

ಹಾಲಿ ಒಟ್ಟು 79 ಹುದ್ದೆಗಳು ಖಾಲಿ ಇರುತ್ತದೆ.

120 ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅ) ಹಾಸನ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ತಾಲ್ಲೂಕು ಆಸ್ಪತ್ರೆಗಳು ಎಷ್ಟು? ತಾಲ್ಲೂಕುವಾರು ಮಾಹಿತಿ ನೀಡುವುದು

ಮಾಹಿತಿಯನ್ನು ಅನುಬಂಧ– 1ರಲ್ಲಿ ನೀಡಲಾಗಿದೆ.

ಆ) ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆಸ್ಪತ್ರೆಗಳಿಗೆ ಸುಸಜ್ಜಿತವಾದ ಕಟ್ಟಡಗಳು ಇವೆಯೇ; ಹಾಗಿಲ್ಲದಿದ್ದಲ್ಲಿ ಕಟ್ಟಡಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಕಟ್ಟಡಗಳು ಲಭ್ಯ ಇವೆ. ಆದರೆ ಹೊಸದಾಗಿ ಮಂಜೂರಾದ 26 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಾಗೂ ನುಗ್ಗೇಹಳ್ಳಿ, ದೊಡ್ಡಕುಂಚೆ ಮತ್ತು ಅರೆಹಳ್ಳಿ ಸಮುದಾಯ ಕೇಂದ್ರಗಳಿಗೆ ಕಟ್ಟಡಗಳು ಲಭ್ಯವಿರುವುದಿಲ್ಲ. ಹಣದ ಲಭ್ಯತೆ